## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನಿವೃತ್ತಿಯಿಂದ ತೆರವಾದ ಖಾಲಿ ಇರುವ ಹುದ್ದೆಗಳಾದ ಬೆರಳಚ್ಚುಗಾರರು/ಅಟೆಂಡರ್/ವಾಹನ ಚಾಲಕರು/ಡಿ-ಗ್ರೂಪ್ ಹುದ್ದೆಗಳಿಗೆ ಸಿಬ್ಬಂದಿಗಳನ್ನು ಬಾಹ್ಯ ಮೂಲಗಳಿಂದ [Out sourcing] ತೆಗೆದುಕೊಳ್ಳುವ ಬಗ್ಗೆ.

**ಓದಲಾಗಿದೆ :** ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿ5(7) ಡಿ ಗ್ರೂಪ್.ವಾ.ಚಾ.ಅ.ಬೆ.ಖಾಹುಬ. 15/2006-07, ದಿನಾಂಕ : 25-07-2006 ಮತ್ತು ದಿನಾಂಕ : 30-11-2006 ಹಾಗೂ ದಿನಾಂಕ : 24-04-2007.

******

**ಪ್ರಸ್ತಾವನೆ:**

**01]** ಮೇಲೆ [1]ರಲ್ಲಿ ಓದಲಾದ ದಿನಾಂಕ : 25-07-2006 ಮತ್ತು ದಿನಾಂಕ : 30-11-2006 ಹಾಗೂ ದಿನಾಂಕ : 24-04-2007ರ ಪತ್ರದಲ್ಲಿ ಆಯುಕ್ತರು, ಸಾ.ಶಿ.ಇ., ಬೆಂಗಳೂರು ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಮತ್ತು ನಿವೃತ್ತಿಯಿಂದ ತೆರವಾಗುವ ಹುದ್ದೆಗಳನ್ನು ಇನ್ನು ಮುಂದೆ ಅನುಕಂಪದ ಆಧಾರದ ನೇಮಕಾತಿಯನ್ನು ಹೊರತುಪಡಿಸಿ ಉಳಿದ ಹುದ್ದೆಗಳನ್ನು ಬೆರಳಚ್ಚುಗಾರರು/ಅಟೆಂಡರ್/ವಾಹನ ಚಾಲಕರು/ಡಿ ಗ್ರೂಪ್ ಹುದ್ದೆಗಳಿಗೆ ಬಾಹ್ಯ ಮೂಲಗಳಿಂದ [Out sourcing] ಭರ್ತಿ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

**02]** ಪ್ರಸ್ತುತ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಈ ಕೆಳಕಂಡಂತೆ ಹುದ್ದೆಗಳು ಖಾಲಿ ಇರುತ್ತದೆ ;-

| ಕ್ರ ಸಂ. | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1. | ಬೆರಳಚ್ಚುಗಾರರು | 46 ಹುದ್ದೆಗಳು |
| 2. | ವಾಹನ ಚಾಲಕರು | 11 ಹುದ್ದೆಗಳು |
| 3. | ಅಟೆಂಡರ್ | 283 ಹುದ್ದೆಗಳು |
| 4. | ಡಿ ದರ್ಜೆ ನೌಕರರು | 950 ಹುದ್ದೆಗಳು |
| | ಒಟ್ಟು | **1290 ಹುದ್ದೆಗಳು** |

**03]** ಪ್ರಸ್ತುತ ಖಾಲಿ ಇರುವ ಒಟ್ಟು 1290 ಹುದ್ದೆಗಳ ಜೊತೆಗೆ ಇನ್ನು ಮುಂದೆ ಉದ್ಭವವಾಗುವ ಬೆರಳಚ್ಚುಗಾರರು/ಅಟೆಂಡರ್/ವಾಹನ ಚಾಲಕರು/ಡಿ ಗ್ರೂಪ್ ನೌಕರರ ಹುದ್ದೆಗಳಿಗೆ ಬಾಹ್ಯ ಮೂಲಗಳಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಈ ಹುದ್ದೆಗಳಿಗೆ ನಿಗದಿಪಡಿಸಲಾದ ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ ರೂ. 10-00 ನ್ನು ಕಡಿಮೆ ಲೆಕ್ಕಾಚಾರ ಮಾಡಿ ಪಾವತಿಸಲಾಗುತ್ತದೆ ಎಂದು ತಿಳಿಸುತ್ತಾ, ಪ್ರಸ್ತುತ 04 ವೃಂದದಲ್ಲಿ ಖಾಲಿ ಇರುವ ಒಟ್ಟು 1290 ಹುದ್ದೆಗಳಿಗೆ ಬಾಹ್ಯ ಮೂಲಗಳಿಂದ ಭರ್ತಿ ಮಾಡಿದಲ್ಲಿ ವಾರ್ಷಿಕ ವೆಚ್ಚ ರೂ. 4 ಕೋಟಿ ಉಂಟಾಗುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಹುದ್ದೆಗಳ ಮಂಜೂರಾತಿಯು ನಿವೃತ್ತಿ/ನಿಧನ ಮತ್ತು ರಾಜೀನಾಮೆಯ ಕಾರಣಗಳಿಂದ ಉದ್ಭವಿಸಿದ ಹುದ್ದೆಗಳಾದ್ದರಿಂದ ಸ್ವಾಭಾವಿಕ ಬೆಳವಣಿಗೆಗಳಲ್ಲಿ ಆಯವ್ಯಯ ಲಭ್ಯವಿರುತ್ತದೆ ಎಂದು ತಿಳಿಸುತ್ತಾ, ಸದರಿ ಹುದ್ದೆಗಳಿಗೆ ಹೊಸದಾಗಿ

ಆಯವ್ಯಯ ಬಿಡುಗಡೆ ಮಾಡುವ ಅವಶ್ಯಕತೆ ಇರುವುದಿಲ್ಲವೆಂದು ಸ್ಪಷ್ಟಪಡಿಸಿ, ಈಗಾಗಲೇ ಆಯವ್ಯಯ ಬಿಡುಗಡೆ ಆಗಿರುವ ಕಾರಣ ಈ ಹುದ್ದೆಗಳನ್ನು ಬಾಹ್ಯ ಮೂಲಗಳಿಂದ ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಅದರಂತೆ ಕೂಲಂಕಷ ಪರಿಶೀಲನೆ ನಂತರ ಈ ಆದೇಶ ಹೊರಡಿಸಲು ಉದ್ದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 163 ಎಸ್‌ಎಲ್‌ಬಿ 2006, ಬೆಂಗಳೂರು, ದಿನಾಂಕ: 03-09-2007.**

**04]** ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನಿವೃತ್ತಿಯಿಂದ ತೆರವಾಗಿ ಖಾಲಿಯಿರುವ ಹುದ್ದೆಗಳಿಗೆ ಅಂದರೆ ಬೆರಳಚ್ಚುಗಾರರು-46 ಹುದ್ದೆ, ವಾಹನ ಚಾಲಕರು - 11 ಹುದ್ದೆ, ಅಟೆಂಡರ್ - 283 ಹುದ್ದೆ, ಡಿ ದರ್ಜೆ ನೌಕರರು - 950 ಹುದ್ದೆ ಅಂದರೆ ಒಟ್ಟು 1290 ಹುದ್ದೆಗಳನ್ನು ಹಾಗೂ ಇನ್ನು ಮುಂದೆ ಬೆರಳಚ್ಚುಗಾರರು/ಅಟೆಂಡರ್/ವಾಹನ ಚಾಲಕರು/ಡಿ ಗ್ರೂಪ್ ವೃಂದದಲ್ಲಿ ಉದ್ಭವವಾಗುವ ರಿಕ್ತ ಸ್ಥಾನಗಳಿಗೆ ನೌಕರರನ್ನು ಬಾಹ್ಯ ಮೂಲಗಳಿಂದ [outsourcing] ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

**05]** ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ : ಆಇ 605 ವೆಚ್ಚ-8/2007, ದಿನಾಂಕ : 14-08-2007ರಲ್ಲಿ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅ.ಟಿ. ಸಂಖ್ಯೆ : ಸಿಆಸುಇ 433 ಸೇನಿಎ 2007, ದಿನಾಂಕ : 28-08-2007ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಸ್ವರ್ಣಲತಾ ಎಂ.ಭಂಡಾರೆ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಇವರಿಗೆ :-**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗಾ.
3) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ (ಸೇವಾ ನಿಯಮಗಳು), ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಅಧೀನ ಕಾರ್ಯರ್ಶಿ, ಆರ್ಥಿಕ ಇಲಾಖೆ [ವೆಚ್ಚ-7 ಮತ್ತು 8], ವಿಧಾನಸೌಧ, ಬೆಂಗಳೂರು.
8) ಶಿಕ್ಷಣ ಇಲಾಖೆಯ ಮಾಹಿತಿ ಕೇಂದ್ರದಲ್ಲಿ ಪ್ರಕಟಿಸುವ ಸಲುವಾಗಿ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.